## ಬರಡುತನದ ಲಕ್ಷಣಗಳು

- ಬೆದೆಗೆ ಬಾರದೇ ಇರುವುದು.
- ಬೆದೆ ಬಂದರೂ ಗರ್ಭಧರಿಸದಿರುವುದು.
- ಪುನಃ ಪುನಃ ಕೃತಕ ಗರ್ಭಧಾರಣೆ ಮಾಡಿಸಬೇಕಾಗುವುದು.
- ಗರ್ಭಪಾತವಾಗುವುದು.
- ಕರು ಹಾಕುವ ಅವಧಿ ಹೆಚ್ಚಾಗುವುದು.
- ಹಾಲು ಉತ್ಪಾದನೆ ಕ್ರಮೇಣ ಕಡಿಮೆಯಾಗುವುದು.

## ಚಿಕಿತ್ಸಾ ವಿಧಾನಗಳು

- ಪಶುವೈದ್ಯರಿಂದ ಸಂಪೂರ್ಣ ಸಂತಾನೋತ್ಪತ್ತಿ ಪರೀಕ್ಷೆ ಮಾಡಿಸಬೇಕು.
- ಸರಿಯಾದ ಸಮಯದಲ್ಲಿ ಕೃತಕ ಗರ್ಭಧಾರಣೆ ಮಾಡಿಸಬೇಕು.
- ಸಾಂಕ್ರಾಮಿಕ ರೋಗಗಳಿಗೆ ಲಸಿಕೆ ಹಾಗೂ ಜೈವಿಕ ಸುರಕ್ಷತಾ ಕ್ರಮಗಳನ್ನು ಅನುಸರಿಸಬೇಕು.
- ಗರ್ಭಾಶಯ ಅಥವಾ ಅಂಡಾಶಯದ ಸಮಸ್ಯೆಗಳಿದ್ದರೆ ಸೂಕ್ತ ಔಷಧಿ ಮತ್ತು ಚಿಕಿತ್ಸೆಯನ್ನು ಪಡೆಯಬೇಕು.
- ಅಗತ್ಯವಿದ್ದರೆ ಹಾರ್ಮೋನ್ ಚಿಕಿತ್ಸೆಯನ್ನು ಪಶುವೈದ್ಯರ ಸಲಹೆಯಂತೆ ನೀಡಬೇಕು.
- ಖನಿಜ ಮಿಶ್ರಣ, ವಿಟಮಿನ್‌ಗಳು ಹಾಗೂ ಸಮತೋಲಿತ ಆಹಾರವನ್ನು ನಿಯಮಿತವಾಗಿ ನೀಡಬೇಕು.

## ಬರಡುತನವನ್ನು ತಡೆಗಟ್ಟುವ ಕ್ರಮಗಳು

- ✓ ಪ್ರತಿದಿನ ಸಮತೋಲಿತ ಆಹಾರ ಮತ್ತು ಖನಿಜ ಮಿಶ್ರಣ ನೀಡಬೇಕು.
- ✓ ಹಸಿರು ಮೇವು, ಒಣಮೇವು ಹಾಗೂ ಶುದ್ಧ ಕುಡಿಯುವ ನೀರನ್ನು ಸಾಕಷ್ಟು ಕೊಡಬೇಕು.
- ✓ ಬೆದೆ ಲಕ್ಷಣಗಳನ್ನು ದಿನಕ್ಕೆ ಕನಿಷ್ಠ ಎರಡು ಬಾರಿ ಗಮನಿಸಬೇಕು.
- ✓ ಬೆದೆ ಬಂದ ಸರಿಯಾದ ಸಮಯದಲ್ಲಿ ಕೃತಕ ಗರ್ಭಧಾರಣೆ ಮಾಡಿಸಬೇಕು
- ✓ ಪ್ರಸವದ ನಂತರ ಪಶುವಿನ ಆರೋಗ್ಯವನ್ನು ನಿಯಮಿತವಾಗಿ ಪರೀಕ್ಷಿಸಬೇಕು
- ✓ ಕೊಟ್ಟಿಗೆಯನ್ನು ಸ್ವಚ್ಛವಾಗಿಡಿ ಹಾಗೂ ಬಿಸಿಲಿನ ಒತ್ತಡವನ್ನು ಕಡಿಮೆ ಮಾಡಬೇಕು
- ✓ ಜಂತುಹುಳು ನಿವಾರಣೆ ಮತ್ತು ಲಸಿಕೆಗಳನ್ನು ಸಮಯಕ್ಕೆ ಸರಿಯಾಗಿ ಮಾಡಿಸಬೇಕು
- ✓ ಗರ್ಭಧಾರಣೆಯ ೬೦-೯೦ ದಿನಗಳ ನಂತರ ಗರ್ಭಪರೀಕ್ಷೆ ಮಾಡಿಸಬೇಕು.

**ನೆನಪಿಡಿ: ಸರಿಯಾದ ಆಹಾರ + ಸರಿಯಾದ ಸಮಯದಲ್ಲಿ ಗರ್ಭಧಾರಣೆ + ಉತ್ತಮ ನಿರ್ವಹಣೆ + ನಿಯಮಿತ ಪಶುವೈದ್ಯಕೀಯ ತಪಾಸಣೆ = ಆರೋಗ್ಯವಂತ ಪಶು ಮತ್ತು ಹೆಚ್ಚಿನ ಲಾಭ**

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ
ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ
ಭಾ.ಕೃ.ಅ.ಪ.-ಕೃಷಿ ವಿಜ್ಞಾನ ಕೇಂದ್ರ,(ದ.ಕ.)ಕಂಕನಾಡಿ, ಮಂಗಳೂರು-575002

# ಪಶುಗಳಲ್ಲಿ ಸಂತಾನೋತ್ಪತ್ತಿ ನಿರ್ವಹಣೆ



**ತಾಂತ್ರಿಕ ಮಾಹಿತಿ:**
**ಡಾ. ಧರಣೇಶ ಎನ್.ಕೆ.,**
ಸಹ ಪ್ರಾಧ್ಯಾಪಕರು (ಪಶುವೈದ್ಯಕೀಯ ವಿಜ್ಞಾನ)
**ಡಾ. ಟಿ.ಜೆ. ರಮೇಶ**
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
**ಡಾ. ತೇಜಸ್ವಿನಿ ಎಮ್.ಪಿ**
ಸಹಾಯಕ ಪ್ರಧ್ಯಾಪಕರು (ಪಶುವೈದ್ಯಕೀಯ ಮಹಾವಿದ್ಯಾಲಯ,ಕ್ಕೊಲಾ)
**ಡಾ. ರಜತ್ ಸಗರೆ**
ಸಹಾಯಕ ಪ್ರಧ್ಯಾಪಕರು (ಪಶುವೈದ್ಯಕೀಯ ಮಹಾವಿದ್ಯಾಲಯ,ಕ್ಕೊಲಾ)
**ಡಾ. ಹರೀಶ ಶೆಣೈ**
ಸಹಾಯಕ ಪ್ರಾಧ್ಯಾಪಕರು (ಬೇಸಾಯ ಶಾಸ್ತ್ರ)
**ಡಾ. ಕೇಧಾರನಾಥ**
ವಿಜ್ಞಾನಿಗಳು (ಸಸ್ಯ ಸಂರಕ್ಷಣೆ)
**ಡಾ. ಮಲ್ಲಿಕಾರ್ಜುನ ಎಲ್**
ವಿಜ್ಞಾನಿಗಳು (ಮಣ್ಣು ವಿಜ್ಞಾನ)
**ಡಾ. ರಶ್ಮಿ ಆರ್.**
ವಿಜ್ಞಾನಿಗಳು (ತೋಟಗಾರಿಕೆ)
**ಡಾ. ಕುಮಾರ್ ರಾಠೋಡ್**
ಸಹಾಯಕ ಪ್ರಾಧ್ಯಾಪಕರು (ಮೀನುಗಾರಿಕೆ)

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಭಾ.ಕೃ.ಅ.ಪ.-ಕೃಷಿ ವಿಜ್ಞಾನ ಕೇಂದ್ರ
ಮೀನುಗಾರಿಕಾ ಕಾಲೇಜು ಆವರಣ ಎಕ್ಕೂರು
ಕಂಕನಾಡಿ ಅಂಚೆ, ಮಂಗಳೂರು ದಕ್ಷಿಣ ಕನ್ನಡ ಜಿಲ್ಲೆ-575002
Email:kvkdkmlr@gmail.com, Web address:http://kvkdk.org

**ಆಗಸ್ಟ್ - 2026**

## ಪಶುಗಳಲ್ಲಿ ಸಂತಾನೋತ್ಪತ್ತಿ ನಿರ್ವಹಣೆ:

### ಸಂತಾನೋತ್ಪತ್ತಿ ನಿರ್ವಹಣೆಯ ಮುಖ್ಯ ಉದ್ದೇಶಗಳು

- ಪ್ರತಿಯೊಂದು ಹಸುವಿನಿಂದ ವರ್ಷಕ್ಕೊಮ್ಮೆ ಒಂದು ಆರೋಗ್ಯಕರ ಕರು ಪಡೆಯುವುದು.
- ಕರು ಜನನಗಳ ನಡುವಿನ ಅಂತರವನ್ನು ಸುಮಾರು **12-13 ತಿಂಗಳು**ಗಳಲ್ಲಿ ಕಾಯ್ದುಕೊಳ್ಳುವುದು.
- ಗರ್ಭಧಾರಣೆಯ ಯಶಸ್ಸಿನ ಪ್ರಮಾಣ ಹೆಚ್ಚಿಸುವುದು.
- ಬಂಜೆತನ ಮತ್ತು ಪದೆ ಪದೆ ಬೆದೆಗೆ ಬರುವ ಸಮಸ್ಯೆಗಳನ್ನು ಕಡಿಮೆ ಮಾಡುವುದು.
- ಹಾಲು ಉತ್ಪಾದನೆಯನ್ನು ಹೆಚ್ಚಿಸುವುದು.

### ಪ್ರಥಮ ಗರ್ಭಧಾರಣೆ ಮಾಡುವ ವಯಸ್ಸು

| ತಳಿಯ ಹೆಸರು | ಪ್ರಥಮ ಬಾರಿಗೆ ಬೆದೆಗೆ ಬರುವ ವಯಸ್ಸು (ತಿಂಗಳುಗಳಲ್ಲಿ) | ಗರ್ಭಧಾರಣೆ ಮಾಡುವಾಗ ಇರಬೇಕಾದ ತೂಕ (ಕಿ.ಗ್ರಾಂ) |
|---|---|---|
| ಜರ್ಸಿ | 14-16 | 240 |
| ಹೆಚ್. ಎಫ್ | 14-16 | 260 |
| ಮಲ್ನಾಡ್ ಗಿಡ್ಡ | 24-30 | 120 |

ಹಸುಗಳಲ್ಲಿ ಬೆದೆಯ ಚಕ್ರ 18-21 ದಿನಗಳು ಮತ್ತು ಬೆದೆಯ ಕಾಲ 24 ಗಂಟೆಗಳು. ಬೆದೆಗೆ ಬಂದ 12-18 ಘಂಟೆಯೊಳಗೆ ಕೃತಕ ಗರ್ಭಧಾರಣೆ ಮಾಡಿಸಬೇಕು. ತಡವಾದಲ್ಲಿ ಗರ್ಭಧರಿಸುವ ಸಾಧ್ಯತೆ ಕಡಿಮೆಯಾಗುತ್ತದೆ.

### ಬೆದೆಯ ಲಕ್ಷಣಗಳು




### ಕೃತಕ ಗರ್ಭಧಾರಣೆ ಮಾಡಿಸುವಾಗ ಗಮನಿಸಬೇಕಾದ ಅಂಶಗಳು

- ಬೆದೆಗೆ ಸಂಜೆ ಬಂದಲ್ಲಿ ಬೆಳಗ್ಗೆ ಹಾಗೂ ಬೆಳಗ್ಗೆ ಬಂದಲ್ಲಿ ಸಂಜೆ (AM-PM ನಿಯಮ) ಕೃತಕ ಗರ್ಭಧಾರಣೆ ಮಾಡಿಸುವುದು ಸೂಕ್ತ
- ಕೃತಕ ಗರ್ಭಧಾರಣೆಯನ್ನು ತರಬೇತಿ ಪಡೆದಿರುವವರಿಂದಲೇ ಮಾಡಿಸಬೇಕು
- ಕೃತಕ ಗರ್ಭಧಾರಣೆ ಮಾಡಿದ ನಂತರ ಪುನಃ ಬೆದೆಗೆ ಬಾರದಿದ್ದಲ್ಲಿ ಮೂರನೇ ತಿಂಗಳಲ್ಲಿ ಗರ್ಭ ಪರೀಕ್ಷೆ ಮಾಡಿಸಬೇಕು.
- ಪುನಃ ಬೆದೆಗೆ ಬಂದರೆ, ತಕ್ಷಣವೇ ಸಮಸ್ಯೆಯ ಕಾರಣವನ್ನು ಪತ್ತೆಹಚ್ಚಿ ಮರು ಚಿಕಿತ್ಸೆ ಅಥವಾ ಮರು AI ಮಾಡಬಹುದು.
- 3-4 ಬಾರಿ ಕೃತಕ ಗರ್ಭಧಾರಣೆ ಮಾಡಿಸಿದರೂ ಗರ್ಭ ನಿಲ್ಲದೇ ಇದ್ದಲ್ಲಿ ಪಶುವೈದ್ಯರ ಬಳಿ ತೋರಿಸಬೇಕು.

ಬರಡುತನ ಎಂದರೆ, ಉತ್ತಮ ಪೌಷ್ಟಿಕ ಆಹಾರ, ಸರಿಯಾದ ನಿರ್ವಹಣೆ ಮತ್ತು ಪುನಃ ಪುನಃ ಗರ್ಭಧಾರಣೆ ಮಾಡಿಸಿದರೂ ಸಹ ಹಸು ಗರ್ಭಧರಿಸದೆ ಇರುವ ಸ್ಥಿತಿ.

